ಉಪ ನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ.

## 2) ಇಲಾಖೆಯ ಸಂಕ್ಷಿಪ್ತ ವಿವರ:-

### 1)ಇಲಾಖೆಯ ವಿವರ:-

ಮಹಿಳಾ ಮತ್ತು ಮಕ್ಕಳ ಇಲಾಖೆಯು ಮಹಿಳೆಯರ ಹಾಗೂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುತ್ತಿದೆ.

### 2)ಇಲಾಖೆಗೆ ಸಂಬಂದಿಸಿದ ಕಾರ್ಯಕ್ರಮಗಳು:-

**ಅ)ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ:-**

ಫಲಾನುಭವಿಗಳಿಗೆ ಅಂಗನವಾಡಿ ಕೇಂದ್ರಗಳಲ್ಲಿ ವಿತರಿಸಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ ವಿವರ 6ತಿಂಗಳಿನಿಂದ 3ವರ್ಷದ 54004 ಮಕ್ಕಳಿಗೆ ಅಮಲೇಸ್ಡ್ ಶಕ್ತಿಯುತ ಆಹಾರವನ್ನು ಮನೆಗೆ ತೆಗೆದುಕೊಂಡು ಹೋಗಲು ನೀಡಲಾಗುತ್ತಿದೆ. 3-6ವರ್ಷದ 46638 ಮಕ್ಕಳಿಗೆ ವಾರದ 6ದಿನಗಳು ಕೇಳಗಿನಂತೆ ಉಪಾಹಾರ ನೀಡಲಾಗುತ್ತದೆ. ವಾರದ 2ದಿನಗಳಲ್ಲಿ ಬಿಸಿಬೆಳೆಭಾತ್ ನ್ಯೂಟ್ರಿಸನ್ ಮಸಾಲ ಮಿಶ್ರ ಶಕ್ತಿಯುತ ಆಹಾರ ಮತ್ತು ನಾಲ್ಕು ದಿನಗಳು ನ್ಯೂಟ್ರಿ ಬಿಸಿಬೆಳೆಭಾತ ಕೇಸರಿಭಾತ್ ಆಹಾರವನ್ನು ನೀಡಲಾಗುತ್ತಿದೆ. 13600-ಗರ್ಭಿಣಿ, 13533-ಬಾಣಂತಿಯರಿಗೆ ಪ್ರತಿ ದಿನ ಅಮಲೇಸ್ಡ್ ಆಹಾರ ನೀಡವುದು ಅಕ್ಕಿ ಹಾಗೂ ಶಕ್ತಿಯುತ ಆಹಾರವನ್ನು ಇವರಿಗೆ ಹಾಗೂ 2600-ಕಿಶೋರಿಯರಿಗೆ ವಾರಕ್ಕೆ ಒಂದು ಬಾರಿ ವಿತರಿಸಿ ಮನೆಗೆ ತೆಗೆದುಕೊಂಡು ಹೋಗಲು ನೀಡಲಾಗುತ್ತಿದೆ.

**ಆ)ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಹೊಂದಾಣಿಕೆ ಅನುದಾನ:-**

2009-10ನೇ ಸಾಲಿನಲ್ಲಿ 26ಮಲ್ಟಿಸೆಕ್ಟರ್ ಮೈನಾರಿಟಿ ಯೋಜನೆಯಡಿ ಹೊಂದಾಣಿಕೆ ಅನುದಾನದಿಂದ ನಿರ್ಮಿಸುತ್ತಿರುವ ಅಂಗನವಾಡಿ ಕಟ್ಟಡಗಳನ್ನು ಪೂರ್ಣಗೊಳಿಸಲು ರೂ.517229-00 ಪಿ.ಆರ್.ಇ.ಡಿ ಏಜೆನ್ಸಿಗೆ ನೀಡಲಾಗಿದೆ. 2010-11ನೇ ಸಾಲಿನಲ್ಲಿ ವಿವಿಧ ಯೋಜನೆಅಡಿಯಲ್ಲಿ 164 ಅಂಗನವಾಡಿ ಕೇಂದ್ರ ಕಟ್ಟಡಗಳ ನಿರ್ಮಾಣ ಕಾರ್ಯಾರಂಭ. (ಕೆ.ಆರ್.ಐ.ಡಿ.ಎಲ್.ಯಾದಗಿರಿ ಮೂಲಕ).

ಉಪ ನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರ.

**ಇ)ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯ ವೇತನ ನೀಡಲಾಗುವದ್ದು:–**

ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳು ಶಾಲೆಯನ್ನು ಬಿಡುವುದನ್ನು ತಪ್ಪಿಸುವುದು ಹಾಗೂ ಹೆಣ್ಣು ಮಕ್ಕಳ ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಆರ್ಥಿಕ ಸಹಾಯ ನೀಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. 5ನೇ–7ನೇ ತರಗತಿಯವರೆಗೆ ಶಿಷ್ಯವೇತನ ರೂ.250–00 ಹಾಗೂ 8–10ನೇ ತರಗತಿಯವರೆಗೆ ರು.500–00 ಶಿಷ್ಯವೇತನ ನೀಡಲಾಗುವುದು.

**ಈ)ಶಿಶುಪಾಲನಾ ಕೇಂದ್ರಗಳು:–**

ವ್ಯವಸಾಯ ಹಾಗೂ ಇನ್ನಿತರ ವೃತ್ತಿ ನಿರತ ಮಹಿಳೆಯರ 0–3 ವರ್ಷದ ಮಕ್ಕಳಿಗೆ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆಶ್ರಯ ನೀಡಲು ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಸ್ವಯಂಸೇವಾ ಸಂಸ್ಥೆಗಳಿಗೆ ಧನಸಹಾಯ 0–3 ವರ್ಷದ ಮಕ್ಕಳ ಪಾಲನೆ ನೈಸರ್ಗಿಕ ಆಪತ್ತುಗಳಿಂದ ರಕ್ಷಿಸುವುದು ಪೂರಕ ಪೌಷ್ಠಿಕ ಆಹಾರ ನೀಡುವುದು ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸುವುದು ಮತ್ತು ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವುದು ಸಹ ಯೋಜನೆಯ ಉದ್ದೆಶವಾಗಿರುತ್ತದೆ. ಶಹಾಪುರ ತಾಲ್ಲೂಕಿನಲ್ಲಿ ಅಂಬಾಭವನಿ ಶಿಶು ಪಾಲನ ಕೇಂದ್ರ ನಡೆಯುತ್ತಿದೆ.

**ಉ)ಸ್ತ್ರೀಶಕ್ತಿ ಯೋಜನೆ:–**

ಸ್ತ್ರೀಶಕ್ತಿ ಯೋಜನೆ ಅಡಿ ಜಿಲ್ಲೆಯ 03 ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ 2771 ಗುಂಪುಗಳು ರಚಿಸಲಾಗಿದ್ದು, ಹಾಗೂ ಯಾದಗಿರಿ ತಾಲ್ಲೂಕಿನ ಬ್ಲಾಕ್‌ದಲ್ಲಿ 100 ಗುಂಪುಗಳು ಸ್ವಯಂಸಿದ್ಧ ಯೋಜನೆ ಅಡಿಯಲ್ಲಿ ರಚನೆಯಾಗಿದ್ದು ಮಹಿಳಾ ಅಭಿವೃದ್ಧಿ ನಿಗಮದಡಿಯಲ್ಲಿ ಪುರಸಭೆ/ಮುನ್ಸಿಪಾಲಿಟಿ ಪಟ್ಟಣ ಪ್ರದೇಶದ ವ್ಯಾಪ್ತಿಯಲ್ಲಿ 810 ಗುಂಪುಗಳು ರಚಿಸಲಾಗಿದ್ದು, ಹೀಗೆ ಒಟ್ಟು 3681 ಗುಂಪುಗಳು ಅಸ್ತಿತ್ವದಲ್ಲಿರುತ್ತವೆ ಸುಮಾರು 57034 ಸಂಘದ ಸದಸ್ಯರಿರುತ್ತಾರೆ. 4820 ಗುಂಪುಗಳ ಸದಸ್ಯರಿಗೆ ಓರಿಯಂಟೇಷನ, ದಾಖಲಾತಿ ನಿರ್ವಹಣೆಯ ಬಗ್ಗೆ ಸಾಲನಿರ್ವಹಣಾ ಕುರಿತು ಹಾಗೂ ಸಾಮಾಜಿಕ ವಿಷಯಗಳ ಕುರಿತು ನುರಿತ ಸಂಘ ಸಂಸ್ಥೆಯವರಿಂದ ತರಬೇತಿ ನೀಡಲಾಗಿದೆ. ತಲಾ ರೂ.5000–00 ರಂತೆ ಇಲಾಖೆ ಅಡಿ ಇದುವರೆಗೆ 2594 ಗುಂಪುಗಳಿಗೆ ಸುತ್ತುನಿಧಿ ನೀಡಲಾಗಿದೆ. ಹೀಗೆ ಒಟ್ಟು 3040 ಗುಂಪುಗಳಿಗೆ 152.00 ಲಕ್ಷ ಸುತ್ತುನಿಧಿ ಅನುದಾನ ಎಸ್.ಹೆಚ್.ಜಿ.ಗಳಿಗೆ ನೀಡಲಾಗಿದೆ. ಬ್ಯಾಂಕ್ ಮುಖಾಂತರ ಒಟ್ಟು 2072 ಗುಂಪುಗಳಿಗೆ ಸಾಲ ಮಂಜೂರಿಯಾಗಿದ್ದು, ಮರುಪಾವತಿಯಲ್ಲಿ ಪ್ರತಿಶತ 100ರಷ್ಟು ಮರುಪಾವತಿ ಮಾಡುತ್ತಿರುವುದರಿಂದ ಯಶಸ್ವಿ ಯೋಜನೆಯಾಗಿದೆ. ಸಣ್ಣ ಪುಟ್ಟ ಆದಾಯೋತ್ಪಾದನೆ ಚಟುವಟಿಕೆಯಲ್ಲಿ ತೊಡಗಿದ 500 ಗುಂಪು ಘಟಕಗಳಿಗೆ ಪ್ರೋತ್ಸಾಹಧನವಾಗಿ ತಲಾ ಗುಂಪಿಗೆ ರೂ.5000–00ರಂತೆ ರೂ.2.50 ಲಕ್ಷ ಸದರಿ ಸಾಲಿನಲ್ಲಿ ವಿತರಿಸಲಾಗಿದೆ. ಈ ಎಲ್ಲಾ ಅನುದಾನದ ಬಳಕೆಯಲ್ಲಿ ರೂ.29.14 ಕೋಟಿ ಅಂತರಿಕ ಸಾಲದ ರೂಪದಲ್ಲಿ ಪಡೆದು ಇದುವರೆಗೆ ರೂ.8.81 ಕೋಟಿ ಬಡ್ಡಿ ರೂಪದಲ್ಲಿ ಸಂಗ್ರಹಣೆಯಾಗಿರುವುದು. ಯೋಜನೆಗೆ ಶ್ಲಾಘನೀಯ ಸಂಗತಿಯಾಗಿದೆ.

2011–12ನೇ ಸಾಲಿನಲ್ಲಿ 171 ಗುಂಪುಗಳು ಮಂಜೂರಾಗಿದೆ.

ಉಪ ನಿರ್ದೇಶಕರ ಕಛೇರಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರ.

**ಖ)ಭಾಗ್ಯ ಲಕ್ಷ್ಮೀ ಯೋಜನೆ:-**

ಕರ್ನಾಟಕ ರಾಜ್ಯ ಸರ್ಕಾರವು ಹೆಣ್ಣು ಮಗುವಿನ ಜನನದ ಬಗ್ಗೆ ಇರುವ ಕಾಳಜಿ ವ್ಯಕ್ತ ಪಡಿಸಲು ಹಾಗೂ ಹೆಣ್ಣು ಮಗುವಿನ ಬಗ್ಗೆ ಸಮಾಜದಲ್ಲಿ ಇರುವ ಧೋರಣೆಯನ್ನು ಬದಲಾಯಿಸಲು 2006-07ನೇ ಸಾಲಿನಲ್ಲಿ "ಭಾಗ್ಯಲಕ್ಷ್ಮೀ" ಎಂಬ ವಿನೂತನ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಹೆಣ್ಣು ಮಗುವಿನ ಸ್ಥಾನವನ್ನು ಸಮುದಾಯ ಹಾಗೂ ಕುಟುಂಬದಲ್ಲಿ ಹೆಚ್ಚಿಸುವುದು ಮತ್ತು ಆರ್ಥಿಕ ನೆರವಿನ ಮೂಲಕ ಸಬಲೀಕರಣಗೊಳಿಸುವುದು ಭಾಗ್ಯಲಕ್ಷ್ಮೀ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಈ ಯೋಜನೆ ಅಡಿಯಲ್ಲಿ 9-10ನೇ ಸಾಲಿನ ವರೆಗೆ 27425 ಫಲಾನುಭಾವಿಗಳಿಗೆ ಗುರುತಿಸಿ ಬಾಂಡುಗಳು ವಿತರಿಸಲಾಗಿದೆ. ಹಾಗೂ 2010-11ನೇ ಸಾಲಿನಲ್ಲಿ 8073 ಫಲಾನುಭವಿಗಳಿಗೆ ಗುರುತಿಸಲಾಗಿದೆ. 2011-12ನೇ ಸಾಲಿನಲ್ಲಿ ಅಗಸ್ಟ-2011ರ ಅಂತ್ಯದ ವರೆಗೆ 384 ಫಲಾನುಭವಿಗಳಿಗೆ ಗುರುತಿಸಲಾಗಿದೆ.

**ಖ )ಬಾಲಸಂಜೀವಿನಿ ಯೋಜನೆ:-**

ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 6 ವರ್ಷದೊಳಗಿನ ಮಕ್ಕಳಿಗೆ ಗುಲಬರ್ಗಾ ಪಟ್ಟಣದಲ್ಲಿರುವ ಎಂ.ಆರ್.ಮೇಡಿಕಲ್ ಕಾಲೇಜ್_ಬಸವೇಶ್ವರ ಮತ್ತು ಸಂಗಮೇಶ್ವರ ಆಸ್ಪತ್ರೆ. ಈ ಆಸ್ಪತ್ರೆಗಳಲ್ಲಿ 3ನೇ ಹಂತದ ಚಿಕಿತ್ಸೆಯನ್ನು ಬಾಲಸಂಜೀವಿನಿ ಯೋಜನೆಅಡಿಯಲ್ಲಿ ಒದಗಿಸಲಾಗುವುದು. 3ನೇ ಹಂತದ ಚಿಕಿತ್ಸೆ ಅವಶ್ಯವಿರುವ ಮಕ್ಕಳಿಗೆ ಗರಿಷ್ಠ ರೂ.35000-00 ಹಾಗೂ ನವಜಾತ ಶಿಶುವಿನ ಆರೈಕೆ ಮತ್ತು ಚಿಕಿತ್ಸೆಗೆ ಗರಿಷ್ಠ ರೂ.50000-00ಗಳನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ.

**3)ಇಲಾಖೆಯ ದೂರವಾಣಿ ಸಂಖ್ಯೆ:- 08473-253739**

**ಫ್ಯಾಕ್ಸ್ ಸಂಖ್ಯೆ:-08473-253739**

ಇ_ಮೇಲ್ ವಿಳಾಸ:-**ddwcdyad@gmail.com**

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಯಾದಗಿರಿ